# Shree Kallurti Daivasthana, Panolibail

## Sajipamooda, Bantwala Taluk

## ಪ್ರಕಟಣೆ

(ಕೋವಿಡ್ -19)

ಧಾರ್ಮಿಕ ದತ್ತಿ ಆಯುಕ್ತರು, ಹಿಂದು ಧಾರ್ಮಿಕ ಸಂಸ್ಥೆ ಹಾಗೂ ಧಾರ್ಮಿಕ ದತ್ತಿ ಇಲಾಖೆ ಬೆಂಗಳೂರು ಇವರ ಕ್ರಮ ಸಂಖ್ಯೆ : ಎ.ಡಿ.ಎಂ. 11 ಸಿ.ಆರ್. 284/2019-2020 ದಿನಾಂಕ - 29-05-2020 ರನ್ವಯ

ಶ್ರೀ ದೈವಸ್ಥಾನಕ್ಕೆ ಪ್ರವೇಶಿಸುವಾಗ ಭಕ್ತಾಭಿಮಾನಿಗಳು, ಕೋವಿಡ್ -19( ಕೊರೋನ ವೈರಸ್) ಹರಡುವುದನ್ನು ತಡೆಗಟ್ಟುವ ಸಲುವಾಗಿ ಈ ಕೆಳಗೆ ತಿಳಿಸಿದ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

1. ಪ್ರತಿಯೊಬ್ಬರು ಮಾಸ್ಕ್ ( ಮುಖಗವಸು) ಅಥವ ಕರವಸ್ತ್ರದಿಂದ ಬಾಯಿ, ಮೂಗನ್ನು ಮುಚ್ಚುವಂತೆ ಧರಿಸಿ ದೈವಸ್ಥಾನವನ್ನು ಪ್ರವೇಶಿಸಬೇಕು. ಎಲ್ಲಿಯೂ ಮಾಸ್ಕನ್ನು ತೆಗೆಯಬಾರದು.

2.ದೈವಸ್ಥಾನದ ಪ್ರವೇಶ ದ್ವಾರದಲ್ಲಿ ಪ್ರತಿಯೊಬ್ಬರೂ ಕೈಗಳನ್ನು ಸ್ಯಾನಿಟೈಸರ್‌ನಿಂದ ತೊಳೆದುಕೊಂಡು ದೈವಸ್ಥಾನವನ್ನು ಪ್ರವೇಶಿಸಬೇಕು.

3.ದೈವಸ್ಥಾನವನ್ನು ಪ್ರವೇಶಿಸುವ ಮೊದಲು ದೇಹದ ಉಷ್ಣತೆಯನ್ನು Infrared Thermometer ನಿಂದ ತಪಾಸಣೆಗೆ ಒಳಪಡುವುದು.

4. ದೈವಸ್ಥಾನಕ್ಕೆ ಪ್ರವೇಶಿಸುವ ಭಕ್ತರು ಸರದಿ ಸಾಲಿನಲ್ಲಿ ಸಾಮಜಿಕ ಅಂತರವನ್ನು ಕಾಯ್ದುಕೊಂಡು (ಒಂದು ವ್ಯ ಒಂದು ಮೀಟರ್ ಅಂತರ ) ನೆಲದಲ್ಲಿ ಗುರುತು ಮಾಡಿದ ಗುರುತಿನಂತೆ ದೈವಸ್ಥಾನವನ್ನು ಪ್ರವೇಶಿಸಿ, ಗುರುತ ಮಾಡಿದ ದಿಕ್ಕಿನಿಂದಲೇ ದೈವಸ್ಥಾನದಿಂದ ಹೊರಬರಬೇಕು.

5. ದೈವಸ್ಥಾನದ ಒಳಾಂಗಣ ಹಾಗೂ ಹೊರಾಂಗಣದಲ್ಲಿ ಮೊಬೈಲ್ ಫೋನ್‌ನಲ್ಲಿ ಮಾತನಾಡುವುದನ್ನು ನಿಷೇಧಿಸಲಾಗಿದೆ.

6. ದೈವಸ್ಥಾನಕ್ಕೆ ಪ್ರವೇಶಿಸುವ ಪ್ರತಿಯೊಬ್ಬ ಭಕ್ತರು ಸ್ವಚ್ಛತೆಯನ್ನು ಕಾಪಾಡಬೇಕು.

7. ದೈವಸ್ಥಾನದ ಒಳಗೆ ದೇವರಿಗೆ ಕೈ ಮುಗಿದು, ಪ್ರದಕ್ಷಿಣೆ ಬಂದು, ಪ್ರಸಾದವನ್ನು ಸ್ವೀಕರಿಸಲು ಅನಾವಶ್ಯಕವಾಗಿ ಸಮಯವನ್ನು ವ್ಯರ್ಥಮಾಡದೇ, ಪ್ರತಿಯೊಬ್ಬ ಭಕ್ತರಿಗೂ ದೇವರ ದರ್ಶನ ಮಾಡಲು ಅನುವು ಮಾಡಿಕೊಡುವು- ದರ ಜೊತೆಗೆ ಸಾಮಾಜಿಕ ಅಂತರವನ್ನು ಕಾಯ್ದುಕೊಂಡು ಶ್ರೀ ದೇವರ ದರ್ಶವನ್ನು ಮಾಡಬೇಕೆಂದು ಕೇಳಿ- ಕೊಳ್ಳುತ್ತೇವೆ.

8. ದೈವಸ್ಥಾನದ ದರ್ಶನಕ್ಕೆ ಮುಂದಿನ ಆದೇಶದವರೆಗೆ 65 ವಯಸ್ಸಿನ ವೃದ್ಧರು, 10 ವರ್ಷದೊಳಗಿನ ಮಕ್ಕಳು, ಗರ್ಭಿಣಿ ಸ್ತ್ರೀಯರು ಆದಷ್ಟು ಮನೆಯಲ್ಲಿಯೇ ಇದ್ದು ಸಹಕರಿಸುವುದು, ಹಾಗೂ ಅಸ್ವಸ್ಥರು ದೈವಸ್ಥಾನದ ಒಳಗೆ ಪ್ರವೇಶಿಸುವುದನ್ನು ನಿಷೇಧಿಸಿದೆ.

9. ದೈವಸ್ಥಾನದ ಒಳಾಂಗಣದಲ್ಲಾಗಲೀ, ಹೊರಾಂಗಣದಲ್ಲಾಗಲೀ ಎಲ್ಲೆಂದರಲ್ಲಿ ತಮ್ಮ ಕೈಗಳಿಂದ ದೈವಸ್ಥಾನದ ಯಾವುದೇ ವಸ್ತುಗಳನ್ನು ಮುಟ್ಟದೇ ಹಾಗೂ ಈ ಮೇಲೆ ತಿಳಿಸಿದ ಸುರಕ್ಷಿತ ಕ್ರಮಗಳನ್ನು ಪಾಲಿಸುವುದರ ಮೂಲಕ ಕೊರೋನ ವೈರಸ್ ಹರಡುವಿಕೆಯನ್ನು ತಡೆಗಟ್ಟುವಲ್ಲಿ ಪ್ರತಿಯೊಬ್ಬ ಭಕ್ತರು ಸಹಕರಿಸಬೇಕಾಗಿ ಈ ಮೂಲಕ ವಿನಂತಿಸುತ್ತೇವೆ.

ಆಡಳಿತಾಧಿಕಾರಿ

ಕಾರ್ಯನಿರ್ವಹಣಾಧಿಕಾರಿ